RNU AIR DHARWAD

MARCH 31, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಇಂದು ಮತ್ತು ನಾಳೆ, ರಾಷ್ಟ್ರಪತಿ ರಾಜ್ಯ ಭೇಟಿ;** ನಾಳೆ, ತುಮಕೂರಿನ ಸಿದ್ಧಗಂಗಾ ಮಠದಲ್ಲಿ, ಶ್ರೀ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವದಲ್ಲಿ ಭಾಗಿ.

**ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ, ಕುಸುಬೆ ಖರೀದಿಗೆ,** ಕೇಂದ್ರ ಕೃಷಿ ಖಾತೆ ಸಚಿವರಿಗೆ, ಸಚಿವ ಎನ್. ಚಲುವರಾಯಸ್ವಾಮಿ, ಮನವಿ.

**ಚಿಕ್ಕಬಳ್ಳಾಪುರ ಜಿಲ್ಲೆಯ,** 180ಕ್ಕೂ ಹೆಚ್ಚು ಕಲ್ಯಾಣಿಗಳನ್ನು, ಪುನರುಜ್ಜೀವಿತ ಗೊಳಿಸುವ ತ್ರೈ ಮಾಸಿಕ ಸ್ವಚ್ಛತಾ ಅಭಿಯಾನಕ್ಕೆ, ಚಾಲನೆ.

**ಜನರಲ್ ತಿಮ್ಮಯ್ಯ ಅವರ,** 121ನೇ ಜನ್ಮದಿನ; ಮಡಿಕೇರಿಯಲ್ಲಿ ಇಂದು ವಿಶೇಷ ಕಾರ್ಯಕ್ರಮ.

<><><>

**ಇಂದು ಮತ್ತು ನಾಳೆ, ರಾಷ್ಟ್ರಪತಿ ದ್ರೌಪದಿ ಮುರ್ಮು,** ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. ಹೊಸದಿಲ್ಲಿಯಿಂದ, ಬೆಂಗಳೂರಿಗೆ ಆಗಮಿಸಲಿರುವ ರಾಷ್ಟ್ರಪತಿಯವರು, ಇಂದು ಬೆಂಗಳೂರಿನ ಲೋಕಭವನದಲ್ಲಿ, ವಾಸ್ತವ್ಯ ಹೂಡಲಿದ್ದಾರೆ. ನಾಳೆ ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ, ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ, 119ನೇ ಜಯಂತ್ಯುತ್ಸವ ಹಾಗೂ ಗುರುವಂದನಾ ಮಹೋತ್ಸವದಲ್ಲಿ, ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರಪತಿಯವರ ಭೇಟಿ ಹಿನ್ನೆಲೆ, ತುಮಕೂರಿನಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. 15 ಸಾವಿರ ಪೊಲೀಸ್ ಸಿಬ್ಬಂದಿ ರಕ್ಷಣೆಗಾಗಿ ನಿಯೋಜಿತರಾಗಿದ್ದಾರೆ ತುಮಕೂರು ನಗರದಲ್ಲಿ, ವಾಹನ ಸಂಚಾರ ಮಾರ್ಗಗಳನ್ನು ಹಲವೆಡೆ ಮಾರ್ಪಡಿಸಲಾಗಿದೆ. ರಾಷ್ಟ್ರಪತಿಯವರು ಪಾಲ್ಗೊಳ್ಳುವ ಕಾರ್ಯಕ್ರಮದ ಎಲ್ಲ ಪೂರ್ವ ಸಿದ್ಧತೆಗಳನ್ನು, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ಅವಲೋಕಿಸಿದ್ದಾರೆ.

<><><>

**ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ,** ಕುಸುಬೆ ಖರೀದಿಸಲು, ರಾಜ್ಯ ಕೃಷಿ ಇಲಾಖೆಗೆ ಅನುಮೋದನೆ ನೀಡುವಂತೆ, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ, ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ ಅವರಿಗೆ, ಮನವಿ ಮಾಡಿದ್ದಾರೆ. ಕೇಂದ್ರ ಕೃಷಿ ಖಾತೆ ಸಚಿವರೊಂದಿಗೆ, ವಿಡಿಯೋ ಸಂವಾದದಲ್ಲಿ ಮಾತನಾಡಿದ, ಸಚಿವ ಎನ್.ಚಲುವರಾಯಸ್ವಾಮಿ, ತೊಗರಿ ಖರೀದಿ ಅವಧಿಯನ್ನು, ನಾಳೆ, ಏಪ್ರಿಲ್ 1 ರಿಂದ 15 ನೇ ತಾರೀಖಿನ ವರೆಗೆ ವಿಸ್ತರಿಸಬೇಕು; ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ ಖರೀದಿಸಲಾದ, ಮಾವು ಬೆಳೆಯ, ಕೇಂದ್ರದ ಬಾಕಿ, 22 ಕೋಟಿ 71 ಲಕ್ಷ ರೂಪಾಯಿ, ಶೀಘ್ರ ಬಿಡುಗಡೆ ಮಾಡುವಂತೆ, ಮನವಿ ಮಾಡಿದರು. ಸಭೆ ಬಳಿಕ ಮಾಹಿತಿ ನೀಡಿದ ಸಚಿವರು, ರಾಜ್ಯದ ಎಲ್ಲ ಬೇಡಿಕೆಗಳಿಗೆ, ಕೇಂದ್ರ ಕೃಷಿ ಖಾತೆ ಸಚಿವರು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

<><><>

**ಚಿಕ್ಕಬಳ್ಳಾಪುರ ಜಿಲ್ಲೆಯ,** ಎಲ್ಲ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯ, ಕಲ್ಯಾಣಿ ಹಾಗೂ ಪು ಷ್ಕರಣಿಗಳನ್ನು, ವಿದ್ಯಾರ್ಥಿಗಳು, ಎನ್.ಎಸ್.ಎಸ್ ಸ್ವಯಂಸೇವಕರು, ಎನ್.ಸಿ.ಸಿ ಕೆಡೆಟ್‌ಗಳು, ಪೌರಕಾರ್ಮಿಕರ ಶ್ರಮದಾನದೊಂದಿಗೆ, ಸ್ವಚ್ಛಗೊಳಿಸಿ, ಜಲಮೂಲಗಳನ್ನು ಪುನರುಜ್ಜೀವಿತ ಗೊಳಿಸುವ, ತ್ರೈ ಮಾಸಿಕ ಸ್ವಚ್ಛತಾ ಅಭಿಯಾನಕ್ಕೆ, ಚಾಲನೆ ನೀಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 180ಕ್ಕೂ ಹೆಚ್ಚು ಕಲ್ಯಾಣಿಗಳನ್ನು, ಪುನರುಜ್ಜೀವಿತ ಗೊಳಿಸುವ ಗುರಿ ಹೊಂದಿದೆ. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ, ಸಿ.ಇ.ಓ. ನವೀನ ಭಟ್, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

**ರಾಜ್ಯದ ಆರ್ಥಿಕ** ಸ್ಥಿತಿಗತಿ ಬಗ್ಗೆ, ಶ್ವೇತಪತ್ರ ಹೊರಡಿಸಿ, ರಾಜ್ಯದ ಜನರಿಗೆ, ಹಣಕಾಸಿನ ಸ್ಪಷ್ಟ ಮಾಹಿತಿ ಒದಗಿಸುವಂತೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಮುಖ್ಯಮಂತ್ರಿ ಹಾಗೂ ಹಣಕಾಸು ಖಾತೆ ಸಚಿವರೂ ಆದ, ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆ, ಪಕ್ಷದ ಅಭ್ಯರ್ಥಿ ಪರ, ಅವರು ಪ್ರಚಾರ ಕಾರ್ಯ ಕೈಗೊಂಡರು. ಬಳಿಕ ಮಾತನಾಡಿದ ಅವರು, ರಾಜ್ಯದ ಹಣಕಾಸು ಸ್ಥಿತಿ ಉತ್ತಮವಾಗಿಲ್ಲ; ಪೊಲೀಸ ಇಲಾಖೆ ಸಿಬ್ಬಂದಿ, ವಿಶ್ವವಿದ್ಯಾಲಯಗಳ ಅತಿಥಿ ಉಪನ್ಯಾಸಕರಿಗೂ, ಸಕಾಲಿಕವಾಗಿ ವೇತನ ಪಾವತಿಸಲಾಗದಷ್ಟು, ಸಮಸ್ಯೆ ಎದುರಿಸುವಂತಾಗಿದೆ ಎಂದು, ದೂರಿದರು.

<><><>

**ಜನರಲ್ ತಿಮ್ಮಯ್ಯ ಅವರ,** 121ನೇ ಜನ್ಮದಿನವಿಂದು. ಮಡಿಕೇರಿಯ ಜನರಲ್ ತಿಮ್ಮಯ್ಯ ಪುತ್ಥಳಿಗೆ, ಪುಷ್ಪಾಂಜಲಿ ಸಲ್ಲಿಸಲಾಗುತ್ತಿದೆ. ಜನರಲ್ ತಿಮ್ಮಯ್ಯ ಅವರು ಜನ್ಮ ತಾಳಿದ ಕೊಡಗು ಜಿಲ್ಲೆ, ಮಡಿಕೇರಿಯ, ಮನೆ, ಸನ್ನಿಸೈಡ್ ನಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಕೊಡಗು ಜಿಲ್ಲಾಡಳಿತ ವತಿಯಿಂದ, ತಿಮ್ಮಯ್ಯ ಸಂಸ್ಮರಣೆ ಕಾರ್ಯಕ್ರಮ ಜರುಗಲಿದೆ. ಮಡಿಕೇರಿಯ ಕೊಡವ ಸಮಾಜ, ಇಂದು ಬೆಳಗ್ಗೆ 10.30ಕ್ಕೆ, ಜನರಲ್ ತಿಮ್ಮಯ್ಯ ಅವರ, ಸೇನಾ ಜೀವನ ಹಾಗೂ ಪರಾಕ್ರಮದ ಬಗ್ಗೆ, ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿದೆ.

<><><>

**ಸರಕು ಮತ್ತು ಸೇವಾ ತೆರಿಗೆ,** ಜಿ.ಎಸ್.ಟಿ. ಮೇಲ್ಮನವಿ ಪ್ರಾಧಿಕಾರದ, ನ್ಯಾಯಾಧಿಕರಣ ಶಾಖೆಯನ್ನು, ಕಿತ್ತೂರು ಕರ್ನಾಟಕದ, ವಾಣಿಜ್ಯಿಕ ರಾಜಧಾನಿ, ಧಾರವಾಡ ಜಿಲ್ಲೆಯ, ಹುಬ್ಬಳ್ಳಿಯಲ್ಲಿ ಸ್ಥಾಪಿಸುವಂತೆ, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಅವರಿಗೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಮತ್ತು ಕೈಗಾರಿಕೋದ್ಯಮ ಸಂಸ್ಥೆ, ಮನವಿ ಮಾಡಿದೆ. ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ, ಜಿ.ಕೆ. ಆದಪ್ಪಗೌಡರ ಮಾಹಿತಿ ನೀಡಿ, ಉತ್ತರ ಕರ್ನಾಟಕ ಭಾಗದ, ಪ್ರಮುಖ ವಾಣಿಜ್ಯ ಹಾಗೂ ಕೈಗಾರಿಕಾ ಕೇಂದ್ರವಾದ, ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳ, ವ್ಯಾಪಾರ, ಕೈಗಾರಿಕೆ, ಸಾರಿಗೆ ಹಾಗೂ ಸೇವಾ ವಲಯಗಳಿಗೆ ಹೆಚ್ಚಿನ ಉತ್ತೇಜನ ನೀಡಲು, ಅನುವಾಗಲಿದೆ ಎಂದು, ತಿಳಿಸಿದ್ದಾರೆ.

<><><>

**ಧಾರವಾಡ ಆಕಾಶವಾಣಿ ಕೇಂದ್ರ ಹಾಗೂ,** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ನಾಡಿನ ಜ್ಞಾನ ಪ್ರಸಾರದ ಕೇಂದ್ರಗಳಾಗಿವೆ. ಕೃಷಿ ರಂಗದಂತಹ ಕಾರ್ಯಕ್ರಮಗಳ ಮೂಲಕ, ಆಕಾಶವಾಣಿ, ಕೃಷಿಕರಿಗೆ ಮಾಹಿತಿಯ ಮೂಲವಾಗಿದೆ ಎಂದು, ಉಪ ಕುಲಪತಿ ಪಿ.ಎಲ್.ಪಾಟೀಲ ಹೇಳಿದ್ದಾರೆ. ಆಕಾಶವಾಣಿ ಧಾರವಾಡ ಕೇಂದ್ರದ, ಸಹಾಯಕ ನಿರ್ದೇಶಕ ಶರಣ ಬಸವ ಚೋಳಿನ ಅವರ, ನಿವೃತ್ತಿ ಹಿನ್ನೆಲೆ, ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಹಲವು ವಿಷಯಗಳ ಬಗ್ಗೆ ತಜ್ಞತೆ ಹೊಂದಿರುವ, ಶರಣಬಸವ ಚೋಳಿನ ಅವರು, ಜನಪರ ಕಾರ್ಯಕ್ರಮಗಳ ಮೂಲಕ ಹೆಸರಾಗಿದ್ದಾರೆ ಎಂದರು. ಮನಗುಂಡಿ, ಶ್ರೀ ಗುರು ಬಸವ ಮಹಾಮನೆಯ, ಶ್ರೀ ಬಸವಾನಂದ ಸ್ವಾಮೀಜಿ ಸಾನಿಧ್ಯವಹಿಸಿದ್ದರು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿ, ಎ.ಎಂ. ಖಾನ್ ಅತಿಥಿಯಾಗಿ ಪಾಲ್ಗೊಂಡಿದ್ದರು.

<><><>

**ಸಮಾಜ ಕಲ್ಯಾಣ ಇಲಾಖೆ ಸುಪರ್ದಿಯ,** ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ, ಧಾರವಾಡದ ಹಿರಿಯ ನ್ಯಾಯವಾದಿ, ಗೀತಾ ಮಲ್ಲಿಕಾರ್ಜುನ ಥಾಂವಶಿ, ನಾಮನಿರ್ದೇಶಿತರಾಗಿದ್ದಾರೆ. ಇಲಾಖೆಯ ಅಧೀನ ಕಾರ್ಯದರ್ಶಿ, ಎಲ್.ನರಸಿಂಹಮೂರ್ತಿ ಅವರಿಂದ, ಅಧಿಕೃತ ಜ್ಞಾಪನಾ ಪತ್ರ ಪಡೆದಿರುವ, ಗೀತಾ ಥಾಂವಶಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಖೇಲೋ ಇಂಡಿಯಾ,** ಪ್ರಥಮ ಬುಡಕಟ್ಟು ಕ್ರೀಡಾಕೂಟ, ಛತ್ತೀಸ್‌ಘಡದಲ್ಲಿ ಆಯೋಜಿತವಾಗಿದ್ದು, ಕರ್ನಾಟಕ, 17 ಚಿನ್ನ, 6 ಬೆಳ್ಳಿ ಹಾಗೂ 5 ಕಂಚಿನ ಪದಕಗಳೊಂದಿಗೆ, ಒಟ್ಟು 28 ಪದಕಗಳನ್ನು ಜಯಿಸಿ, ಪದಕ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. ಕರ್ನಾಟಕದ ಎಲ್.ಮಣಿಕಂಠ ಈಜು ಸ್ಪರ್ಧೆಯಲ್ಲಿ, ಒಟ್ಟು 8 ಚಿನ್ನದ ಪದಕ ಹಾಗೂ ಒಂದು ಬೆಳ್ಳಿ ಪದಕವನ್ನು ಜಯಿಸಿ, ಕ್ರೀಡಾಕೂಟದ ಚಿನ್ನದ ಮೀನು ಎನಿಸಿದ್ದಾರೆ. ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾಕೂಟದಲ್ಲಿ, ಒಟ್ಟು 30 ರಾಜ್ಯಗಳ, 3 ಸಾವಿರ ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ. ಏಪ್ರಿಲ್ 3 ರ ವರೆಗೆ ಕ್ರೀಡಾಕೂಟ ನಡೆಯಲಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

**ವಿರಾಜಪೇಟೆ ಶಾಸಕ** ಎ.ಎಸ್ ಪೊನ್ನಣ್ಣ, 20 ಲಕ್ಷ ರೂಪಾಯಿ ಸ್ವಂತ ವೆಚ್ಚದಲ್ಲಿ, ವಿರಾಜಪೇಟೆ ಸಾರ್ವಜನಿಕರಿಗೆ, ಕುಡಿಯುವ ನೀರಿನ ವಿತರಣೆ ವ್ಯವಸ್ಥೆ ರೂಪಿಸಿದ್ದಾರೆ.

**ದಕ್ಷಿಣಕನ್ನಡ ಜಿಲ್ಲೆ, ಕಬಕ** – ಪುತ್ತೂರು ರೈಲು ನಿಲ್ದಾಣದಲ್ಲಿ, ಮೂಲಸೌಕರ್ಯ ಕಲ್ಪಿಸಲು, 2 ಕೋಟಿ 91 ಲಕ್ಷ ರೂಪಾಯಿ ಮೊತ್ತದ ಅಭಿವೃದ್ಧಿ ಯೋಜನೆಗೆ, ಮಂಜೂರಾತಿ ದೊರೆತಿದೆ ಎಂದು, ದಕ್ಷಿಣಕನ್ನಡ ಸಂಸದ ಬ್ರಿಜೇಶ್ ಚೌಟ ತಿಳಿಸಿದ್ದಾರೆ.

**ಚಿಕ್ಕಮಗಳೂರು ಜಿಲ್ಲೆ, ಕಡೂರಿನಲ್ಲಿ,** ಏಪ್ರಿಲ್ 10 ರಿಂದ 13 ರ ವರೆಗೆ, 21 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಸಾಹಿತಿ ಎಂ.ಜಯಮ್ಮ ಅವರ, ಸರ್ವಾಧ್ಯಕ್ಷತೆಯಲ್ಲಿ, ನಡೆಯಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಇಂದು ಮತ್ತು ನಾಳೆ, ರಾಷ್ಟ್ರಪತಿ ರಾಜ್ಯ ಭೇಟಿ;** ನಾಳೆ, ತುಮಕೂರಿನ ಸಿದ್ಧಗಂಗಾ ಮಠದಲ್ಲಿ, ಶ್ರೀ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವದಲ್ಲಿ ಭಾಗಿ.

**ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ, ಕುಸುಬೆ ಖರೀದಿಗೆ,** ಕೇಂದ್ರ ಕೃಷಿ ಖಾತೆ ಸಚಿವರಿಗೆ, ಸಚಿವ ಎನ್. ಚಲುವರಾಯಸ್ವಾಮಿ, ಮನವಿ.

**ಚಿಕ್ಕಬಳ್ಳಾಪುರ ಜಿಲ್ಲೆಯ,** 180ಕ್ಕೂ ಹೆಚ್ಚು ಕಲ್ಯಾಣಿಗಳನ್ನು, ಪುನರುಜ್ಜೀವಿತ ಗೊಳಿಸುವ ತ್ರೈ ಮಾಸಿಕ ಸ್ವಚ್ಛತಾ ಅಭಿಯಾನಕ್ಕೆ, ಚಾಲನೆ.

**ಜನರಲ್ ತಿಮ್ಮಯ್ಯ ಅವರ,** 121ನೇ ಜನ್ಮದಿನ; ಮಡಿಕೇರಿಯಲ್ಲಿ ಇಂದು ವಿಶೇಷ ಕಾರ್ಯಕ್ರಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>